
2019

ನುಡಿ ಸಂಭ್ರಮ - ೨೦೧೯ ಕ್ಕೆ ತಮಗೆಲ್ಲಾ

ಗೌರವ ಪೂರ್ವಕ ಸ್ವಾಗತ.

- ಶ್ರೀ ಪ್ರಗುನ್ ಜಿಂದಾಲ್ ಕೇತನ
- ಶ್ರೀ ಕೆ. ಆರ್. ರಘುನಾಥ್.
- ಶ್ರೀ ಬಿ.ಡಿ. ಗರ್ಗ್.
- ಶ್ರೀ ಧೀರಜ್ ಸಿಂಗ್.
- ಶ್ರೀ ನವೀನ್ ಮೆಹ್ತಾ.
- ಶ್ರೀ. ಕೆ. ಆರ್ ಸೋನಿ.
- ಮುಖ್ಯೋಪಾಧ್ಯಾಯರು (ಜೆ. ಪಿ. ಎಸ್)
- ಸಹ ಮುಖ್ಯೋಪಾಧ್ಯಾಯರು (ಜೆ. ಪಿ. ಎಸ್)

ಜಿಂದಲ್ ಮಹಿಳಾ ಕಾಲೇಜು
ಜಿಂದಲ್ ನಗರ ತುಮಕೂರು ರಸ್ತೆ ಬೆಂಗಳೂರು_73

# ನುಡಿ ಸಂಭ್ರಮ –2019

- ವರದಿಯ ವಿವರ:
- ಪೀಠಿಕೆ
- ಕಾರ್ಯಕ್ರಮದ ಪಟ್ಟಿ
- ಕಾರ್ಯಕ್ರಮದ ವರದಿ
- ಉಪಸಂಹಾರ
- ಫೋಟೊ ಗ್ಯಾಲರಿ

## ಪೀಠಿಕೆ:

ಕನ್ನಡ ರಾಜ್ಯೋತ್ಸವ ಅಥವಾ **ಕರ್ನಾಟಕ** ರಾಜ್ಯೋತ್ಸವ ಪ್ರತಿ ವರ್ಷದ ನವೆಂಬರ್ ೧ ರಂದು ಆಚರಿಸಲಾಗುತ್ತದೆ. **ಮೈಸೂರು** ರಾಜ್ಯವು(ಈಗಿನ ಕರ್ನಾಟಕ) ೧೯೫೬ರ ನವೆಂಬರ್ ೧ರಂದು ನಿರ್ಮಾಣವಾದುದರ ಸಂಕೇತವಾಗಿ ಈ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆ-ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಿದ ಈ ದಿನವನ್ನು ಕನ್ನಡಿಗರು ನಾಡಹಬ್ಬವನ್ನಾಗಿ ಆಚರಿಸುತ್ತಾರೆ. ಈ ನಾಡ ಹಬ್ಬವನ್ನು ಎಲ್ಲ ವಿದ್ಯಾರ್ಥಿನಿಯರು ಯಾವುದೆ ಭಿನ್ನಭೇದಭಾವವಿಲ್ಲದೆ ಒಟ್ಟಿಗೆ ಸೇರಿ ಸಡಗರ ಸಂಭ್ರಮದಿಂದ ಆಚರಿಸುತ್ತಾರೆ.

## ಕಾರ್ಯಕ್ರಮದ ವಿವರ

- ನಾಡಗೀತೆ
- ಉದ್ಘಾಟನೆ – ಅತಿಥಿ ಗಣ್ಯರಿಂದ
- ಸ್ವಾಗತಭಾಷಣ
- ನುಡಿ ಸಂಭ್ರಮದ ಪ್ರಾಸ್ತಾವಿಕ ನುಡಿ
- ಅತಿಥಿಗಳ ಪರಿಚಯ
- ಅತಿಥಿಗಳಿಂದ ಭಾಷಣ
- ಪ್ರಾಂಶುಪಾಲರ ನುಡಿ
- ಉಪಪ್ರಾಂಶುಪಾಲರ ನುಡಿ
- ಬಹುಮಾನ ವಿತರಣೆ
- ಗೌರವಣೆ ಸಮರ್ಪಣೆ
- ವಂದನಾರ್ಪಣೆ

## ಸಾಂಸ್ಕೃತಿಕ ಕಾರ್ಯಕ್ರಮ

- ಪ್ರಾದೇಶಿಕ ಭಾಷೆಗಳ ಸಂಭ್ರಮ
- ಕನ್ನಡ – ಪ್ರಥಮ ಬಿಕಾಂ ವಿದ್ಯಾರ್ಥಿನಿಯರಿಂದ
- ಲಂಬಾಣಿ– ದ್ವಿತೀಯ ಬಿಕಾಂ ವಿದ್ಯಾರ್ಥಿನಿಯರಿಂದ
- ಕೊಡವ– ಬಿಬಿಎ ವಿದ್ಯಾರ್ಥಿನಿಯರಿಂದ
- ಕೊಂಕಣಿ– ಬಿಎಸ್ಸಿ ವಿದ್ಯಾರ್ಥಿನಿಯರಿಂದ
- ತುಳು– ಬಿಸಿಎ ವಿದ್ಯಾರ್ಥಿನಿಯರಿಂದ

## ಕಾರ್ಯಕ್ರಮದ ವರದಿ:-

ಕನ್ನಡಕೆ ಹೋರಾಡು ಕನ್ನಡದ ಕಂದ
ಕನ್ನಡವ ಕಾಪಾಡು ನನ್ನ ಆನಂದ
ಜೋಗುಳದ ಹರಕೆಯಿದು ಮರೆಯದಿರು ಚಿನ್ನ
ಮರೆಯಾದರೆ ನೀ ನನ್ನ ಮರೆತಂತೆ... ಎಂಬ ಕುವೆಂಪುರವರ ಸಾಲುಗಳನ್ನು ನೆನೆಯುತ್ತಾ ದಿನಾಂಕ 02 ನವೆಂಬರ್ 2019 ರಂದು ಪ್ರಥಮ ಬಿಕಾಂ ವಿದ್ಯಾರ್ಥಿನಿಯರ ನಾಡಗೀತೆಯೊಂದಿಗೆ 64 ನೇ ನುಡಿ ಸಂಭ್ರಮ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ದೊರೆಯಿತು.ಬಂದಿಹಿರಿ ಬಂದಿಹಿರಿ. ಕನ್ನಡದ ಮಣಿಗಳಿರ ಬಂದಿಹಿರಿ. ಬಂದಿಹಿರಿ ಕನ್ನಡದ ದೇವಿಯಾರಾಧನೆಗೆ... ಎಂದು ಹೇಳುತ್ತಾ ಕರ್ನಾಟಕ ರಾಜ್ಯೋತ್ಸವ(ನುಡಿ ಸಂಭ್ರಮ)ದ ಸಂಭ್ರಮಾಚರಣೆಗೆ ಆಗಮಿಸಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ,ಜೊತೆಗೆ ಅನೇಕ ಕತೆ, ಕವನ ನಾಟಕ, ಲೇಖನಗಳಬರಹಗಾರರಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಗುರ್ತಿಸಿಕೊಂಡಿರುವ ಡಾ. ಪದ್ಮಿನಿನಾಗರಾಜ್‌ರವರನ್ನು,ಪ್ರಾಂಶುಪಾಲರಾದ ಡಾ.ಸಿ. ಸೇವಿತಾಯ ಮೇಡಂ ಹಾಗೂ ಉಪಪ್ರಾಂಶುಪಾಲರಾದ ಶೋಭ ಮೇಡಂರವರನ್ನು ಕಾರ್‍ಯಕ್ರಮಕ್ಕೆ ಸ್ವಾಗತಿಸಲಾಯಿತು. ನಂತರದಲ್ಲಿ ಹಚ್ಚೇವು ಕನ್ನಡದ ದೀಪ... ಎಂದು ಕನ್ನಡದ ಜ್ಯೋತಿಯನ್ನು ಬೆಳಗುವ ಮೂಲಕ ಅತಿಥಿ ಗಣ್ಯರು ಕಾರ್‍ಯಕ್ರಮದ ಯಶಸ್ಸಿಗೆ ನಾಂದಿಯಾಡಿದರು. ಕನ್ನಡ ನಾಡು ಸ್ವಾತಂತ್ರ್ಯದ ನಂತರ, ಒಡೆಯರ್ ಮಹಾರಾಜ ಭಾರತದ ಭಾಗವಾಗಲು ಸಮ್ಮತಿಸಿದರು. ೧೯೪೭ರಲ್ಲಿ , ಮೈಸೂರು ಭಾರತದ ರಾಜ್ಯವಾಯಿತು, ಹಾಗು ಪೂರ್ವ ಮಹಾರಾಜ ೧೯೫೦ರ ವರೆಗೆ ರಾಜ್ಯಪಾಲರಾದರು. "ಏಕೀಕರಣ" ಚಳುವಳಿ ೧೯ನೆಯ ಶತಮಾನದ ಎರಡನೇ ಭಾಗದಲ್ಲಿ ಪ್ರಾರಂಭವಾಗಿ ೧೯೫೬ ರಾಜ್ಯ ಪುನಸ್ಸಂಘಟನೆ ಕಾಯಿದೆಯೊಂದಿಗೆ ಮುಕ್ತಾಯವಾಯಿತು. ಇದರಿಂದ ಕೂರ್ಗ್, ಮದ್ರಾಸ್, ಹೈದರಾಬಾದ್, ಹಾಗು ಬಾಂಬೆ ರಾಜ್ಯದ ಭಾಗಗಳನ್ನು ಮೈಸೂರು ರಾಜ್ಯಕ್ಕೆ ಸೇರ್ಪಡಿಸಲಾಯಿತು. ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಪುನರ್ನಾಮಕರಣ ಮಾಡಲಾಯಿತು. ಕರ್ನಾಟಕ ರಾಜ್ಯ ರೂಪುಗೊಂಡಾಗ ಒಟ್ಟು ೧೯ ಜಿಲ್ಲೆಗಳನ್ನು ಒಳಗೊಂಡಿತ್ತು. ಅಂದಿನಿಂದ ನವೆಂಬರ್ ೧ ನ್ನು ಕನ್ನಡ ರಾಜ್ಯೋತ್ಸವ / ಕರ್ನಾಟಕ ರಾಜ್ಯೋತ್ಸವವಾಗಿ ಆಚರಿಸಲಾಗುತ್ತದೆ. ಎಂದು ರಾಜ್ಯೋತ್ಸವದ ಆಚರಣೆಯ ಆಶಯ ನುಡಿಗಳನ್ನು, ಜೊತೆಗೆ ಅತಿಥಿಗಣ್ಯರ ಪರಿಚಯವನ್ನು ಗಣಿತಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಮಮತ ರವರು ನೆರವೇರಿಸಿ ಕೊಟ್ಟರು.

ನಂತರದಲ್ಲಿ ಅತಿಥಿಗಣ್ಯರು ಕರ್ನಾಟಕ ರಾಜ್ಯೋತ್ಸವದ ಆಚರಣೆಯ ಹಿನ್ನಲೆಯನ್ನು ತಿಳಿಸಿಕೊಡುವುದರ ಜೊತೆಗೆ ಹೆಣ್ಣಿಗೆ ನಮ್ಮ ಸಮಾಜದಲ್ಲಿ ಸಿಗುವ ಸ್ಥಾನ ಹಾಗೂ ಅವಳನ್ನು ನೋಡುವ ದೃಷಿಕೋನವನ್ನು ಕುರಿತು ನಮ್ಮ ವಿದ್ಯಾರ್ಥಿನಿಯರಿಗೆ ಮನವರಿಕೆ ಮಾಡಿಕೊಟ್ಟರು. ಅನಂತರದಲ್ಲಿ ಪ್ರಾಂಶುಪಾಲರು ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಒಂದೆರಡು ಕಿವಿಮಾತುಗಳನ್ನು ಹೇಳಿದರು.ಉಪಪ್ರಾಂಶುಪಾಲರು ಮಾತನಾಡಿ ಕರ್ನಾಟಕದ ಹಿರಿಮೆ-ಗರಿಮೆಯನ್ನು ಮತ್ತೊಮ್ಮೆ ಸಾರಿದರು. ಅಷ್ಟೇ ಅಲ್ಲದೆ ಕೇಂದ್ರ ಸರ್ಕಾರವು 2019 ನೇ ವರ್ಷವನ್ನು ಅಂತರ ರಾಷ್ಟ್ರೀಯ ಪ್ರಾದೇಶಿಕ ವರ್ಷವೆಂದು ಘೋಷಣೆ ಮಾಡಿದ್ದು, ಇದರ ಅಂಗವಾಗಿ ಪ್ರಾದೇಶಿಕ ಭಾಷೆಗಳ ಮಹತ್ವ ಸವಾಲು ಹಾಗೂ ಸಾಧ್ಯತೆಗಳನ್ನು ಕುರಿತು ಅಂತರ ಕಾಲೇಜು ಲೇಖನ ಸ್ಪರ್ಧೆಯನ್ನು ಸಹ ಏರ್ಪಡಿಸಲಾಗಿದ್ದು ಅಂಚೆ ಮತ್ತು ಮಿಂಚಂಚೆಯ ಮೂಲಕ ಲೇಖನಗಳನ್ನು ಆಹ್ವಾನಿಸಿದ್ದು, ಆಯ್ಕೆಯಾದ ಎರಡು ಲೇಖನಗಳಿಗೆ ಪ್ರಥಮ ಹಾಗೂ ದ್ವಿತೀಯ ಬಹುಮಾನವನ್ನು, ಜೊತೆಗೆ ನಮ್ಮ ಕಾಲೇಜಿನಲ್ಲಿ ನಡೆದ ಇಂದಿನ ಶಿಕ್ಷಣದ ಉದ್ದೇಶ ಕೇವಲ ಉದ್ಯೋಗಕ್ಕೆ ಮಾತ್ರ ಸೀಮಿತ ಪರ/ವಿರೋಧ ಎಂಬ ವಿಷಯ ಕುರಿತ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದ ವಿದ್ಯಾರ್ಥಿನಿಯರಿಗೆ, ಹಾಗೂ ಚಿತ್ರ

ಶಿಕ್ಷಣ ಕುರಿತು ಸೃಜನಶೀಲ ಬರವಣಿಗೆ ಸ್ಪರ್ಧೆಯಲ್ಲಿ ಬಹುಮಾನ ಪಡೆದ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಣೆ ಅದೇ ರೀತಿ ಪದವಿ ಪೂರ್ವ ಪರೀಕ್ಷೆ ಹಾಗೂ ಪದವಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ನಮ್ಮ ವಿದ್ಯಾರ್ಥಿನಿಯರು ರಚಿಸಿದ ತರಗತಿಯ ಸೃಜನಶೀಲ ಬರವಣಿಗೆಯನ್ನು ಅತಿಥಿ ಗಣ್ಯರು ಬಿಡುಗಡೆಗೊಳಿಸಿದರು. ನಂತರದಲ್ಲಿ ಕಾಲೇಜಿನ ವತಿಯಿಂದ ಅತಿಥಿಗಣ್ಯರನ್ನು ಗೌರವಿಸುವ ಮೂಲಕ ಔಪಚಾರಿಕ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು. ಅನಂತರದಲ್ಲಿ ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ತುಳು, ಕನ್ನಡ, ಲಂಬಾಣಿ, ಕೊಡವ, ಕೊಂಕಣಿ ಪ್ರಾದೇಶಿಕ ಭಾಷೆಗಳ ಹಿನ್ನಲೆ ಅಲ್ಲಿನ ಸಂಸ್ಕೃತಿ, ಆ ಭಾಷೆಗಳ ಸೊಗಡನ್ನು ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಯಕ್ಷಗಾನ, ಡೊಳ್ಳು ಕುಣಿತ, ಪಟಕುಣಿತ, ಕಂಸಾಳೆ, ಹುಲಿವೇಷ, ಭೂತಾರಾಧನೆ, ಕೋಲಾಟ ಮುಂತಾದ ಜಾನಪದದ ಸೊಗಡನ್ನು ಸಾರುವ ಹಾಡು ನೃತ್ಯ, ನಾಟಕವನ್ನು ಪ್ರದರ್ಶಿಸುವ ಮೂಲಕ ಜನರ ಮನಸೂರೆಗೊಂಡರು. ಅಂತಿಮವಾಗಿ ಭಾರತೀಯ ಸಂಸ್ಕೃತಿಯ ಪ್ರತೀಕವಾದ ರಾಮಾಯಣದ ಕೆಲವು ತುಣುಕುಗಳನ್ನು ನಾಟಕದ ರೂಪದಲ್ಲಿ ತೋರಿಸಿಕೊಂಡುವುದರೊಂದಿಗೆ ಅಂತಿಮವಾಗಿ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು.

25/11/19

ಪ್ರಾಂಶುಪಾಲರಸಹಿ/-

PRINCIPAL
Jindal College for [illegible]
Jindal Nagar, Tum[illegible]

## ಫೋಟೋ ಗ್ಯಾಲರಿ

YsÀ

